ಯಾರೋ ಆಗಿರಬಹುದಾದ ಸಾಧ್ಯತೆಯೂ ಇದೆ ಆ ಜಗದಲ್ಲಿ. ಹುಟ್ಟು ಮತ್ತು ಸಾವನ್ನು ಯಾವುದು ಹೊಂದಿದೆಯೋ ಅದಕ್ಕಿರುವ ಮೌಲ್ಯ, ಆದಿ ಅಂತ್ಯವಿಲ್ಲದಿರುವುದಕ್ಕೆ ಇಲ್ಲ. ಎಲ್ಲವೂ ಪುನರ್‌ಸೃಷ್ಟಿಗೊಳ್ಳುತ್ತ ಅನಂತವಾಗಿರುವುದರ ಮೌಲ್ಯ ನಿರ್ಧರಿಸಲಾದೀತೇ? ಅಸಲಿಗೆ ಅದಕ್ಕೆ ಮೌಲ್ಯವೆಂಬುದುಂಟೇ? ಈ ಡಿಜಿಟಲ್ ಪ್ರಪಂಚ ಕೂಡಾ ಈ ಇನ್ಫಿನಿಟಿ ನಿಯಮದ ಆಧಾರದ ಮೇಲೇ ನಿಂತಿದೆ. ಅಲ್ಲಿರುವ ಪ್ರತಿಯೊಂದು ವಸ್ತು(?)ವಿಗೂ ಇರುವ ಬೆಲೆಯೆಷ್ಟು, ಅಥವಾ ಬೆಲೆಯಿದೆಯೇ ಎಂಬುದನ್ನು ನಿರ್ಧರಿಸುವುದು ಕಷ್ಟ. ಯಾಕೆಂದರೆ, ಡಿಜಿಟಲ್ ಜಗತ್ತೆಂಬುದು ಕೇವಲ ಒಂದು ಸ್ಥಿತಿ, ಅಸ್ತಿತ್ವವಲ್ಲ.

ಆ ಜಗದ ಅಪಾರ ಸಾಧ್ಯತೆಗಳಲ್ಲಿ ಒಂದಾದ ದುಡ್ಡಿನ ಚಲಾವಣೆಯನ್ನೇ ನೋಡೋಣ. ದುಡ್ಡು ಅನ್ನುವ ಕಾನ್ಸೆಪ್ಟ್ ಶುರುವಾದದ್ದೇ ನಂಬಿಕೆ ಅನ್ನುವ ಆಧಾರದಮೇಲೆ. 'ನಾನು ನಿನಗೆ ಈ ಕಾಗದದ ಮುಖೇನ ಇಷ್ಟು ರೂಪಾಯಿಯ ಮೌಲ್ಯವನ್ನು ಕೊಡುತ್ತಿರುವೆ' ಎಂಬ ಪ್ರಮಾಣವಿದೆ ಅಲ್ಲಿ. ಅಲ್ಲಿರುವ ಆ ಭೌತಿಕ ಸ್ಪರ್ಶಕ್ಕೆ, ಯಾರೋ ಒಬ್ಬ ಅನಾಮಿಕನ ಪ್ರಮಾಣವನ್ನೂ ಪುಷ್ಟೀಕರಿಸುವ ಶಕ್ತಿಯಿದೆ. ಆದರೆ, ಈ ಡಿಜಿಟಲ್ ವಹಿವಾಟಿನಲ್ಲಿ, ಹಣ ನಿಮ್ಮ ಸ್ಪರ್ಶ ಹಾಗೂ ನೋಟಕ್ಕೆ ದಕ್ಕುವುದೇ ಇಲ್ಲ. ಯಾರೋ ಅದನ್ನು ನಿಮಗೆ ಕೊಟ್ಟು, ಅದನ್ನು ನೀವೆಲ್ಲೋ ಇಟ್ಟು, ಮುಂದೆ ಮತ್ಯಾರಿಗೋ ನೀಡಿ, ಆತ ಅದನ್ನು ಅವನದಾಗಿಸಿಕೊಳ್ಳುತ್ತ ನೂರಾರು ಕೈ ದಾಟಿದರೂ ಯಾರ ಬೆರಳಿಗೂ ಅದು ತಾಕುವುದಿಲ್ಲ. ಆದರೂ ಅದರ ಇರುವಿಕೆಯ ಬಗ್ಗೆ ನಮಗೆ ನಂಬಿಕೆಯಿದೆ. ಇತ್ತೀಚೆಗೆ ಮುನ್ನೆಲೆಗೆ ಬರುತ್ತಿರುವ 'ಕ್ರಿಪ್ಟೋ ಕರೆನ್ಸಿ'ಯನ್ನೇ ತೆಗೆದುಕೊಳ್ಳಿ. ಯಾವುದೇ ನೆಲೆಯಲ್ಲಿಯೂ ಅದಕ್ಕೆ ಒಂದು ಭೌತಿಕ ಅಸ್ತಿತ್ವವೆಂಬುದೇ ಇಲ್ಲ. ಈ ಕ್ರಿಪ್ಟೋ ನಾಣ್ಯಗಳನ್ನು ಡಿಜಿಟಲ್ ಗಣಿಗಾರಿಕೆಯ ಮುಖೇನವೇ ಉತ್ಪಾದಿಸಲಾಗುತ್ತದೆ. ಅದರ ಕೊಡು ಕೊಳ್ಳುವಿಕೆ ಸಂಪೂರ್ಣ ಡಿಜಿಟಲ್ ರೂಪದಲ್ಲೇ ನಡೆಯುತ್ತದೆ. ಕೊನೆಗೆ ಅದನ್ನು ನಮ್ಮಿಂದ ಯಾರೂ ಕದಿಯಕೂಡದೆಂದು ಸುರಕ್ಷಿತವಾಗಿ ಇಡುವ ಲಾಕರ್ ಕೂಡ ಡಿಜಿ ವ್ಯಾಲೆಟ್ಟೇ ಆಗಿದೆ. (ಇಲ್ಲೊಂದು ಪರಿಸರ ಕಾಳಜಿಯ ವಿಪರ್ಯಾಸವೂ ಉಂಟು. ಡಿಜಿಟಲ್ ಪರಿಸರಕ್ಕೆ ಹೆಚ್ಚು ಹಾನಿ ಮಾಡದಂತೆ ಗಣಿಗಾರಿಕೆ ನಡೆಸಿ ಉತ್ಪಾದಿಸಿದ ನಾಣ್ಯಕ್ಕೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಪ್ರಾಶಸ್ತ್ಯವಿದೆಯಂತೆ.) ಅಚ್ಚರಿಯೆಂದರೆ, ಜಗತ್ತಿನಲ್ಲಿ ಇಂದು ಅತಿ ದೊಡ್ಡ ಮೊತ್ತದ ಹಣದ ವರ್ಗಾವಣೆ ಆಗುತ್ತಿರುವುದು ಈ ಅಮೂರ್ತ ನಾಣ್ಯಗಳ ಮುಖೇನವೇ.

ಒಂದು ಸಂಗತಿಯನ್ನು ನಾವಿಲ್ಲಿ ಗಮನಿಸಬೇಕು, ದುಡ್ಡಿಗೆ ಮೌಲ್ಯ ಬರುವುದು ಅದನ್ನು ಸ್ವೀಕರಿಸುವವನಿಂದಲೇ ಹೊರತು ಕೊಡುವವನಿಂದ ಅಲ್ಲ. ಸೂಕ್ಷ್ಮವಾಗಿ ನೋಡಿ, ಭೌತಿಕ ವಹಿವಾಟದಲ್ಲಿರುವಂತೆ, ಕೊಟ್ಟದ್ದನ್ನು ತಿರಸ್ಕರಿಸುವ ಸ್ವಾತಂತ್ರ್ಯವನ್ನು ನಿಮಗೆ ಡಿಜಿಟಲ್ ಲೋಕ ಕರುಣಿಸುವುದಿಲ್ಲ. ಅದಕ್ಕಾಗಿ ನೀವು ಒತ್ತಾಯಿಸ ಹೊರಟರೆ ನಿಮಗಲ್ಲಿ ಜಾಗವಿಲ್ಲ. ಆ ಹಕ್ಕನ್ನು ಕಳೆದುಕೊಂಡೂ ನಾವಲ್ಲಿ ಬದುಕುವ ಅನಿವಾರ್ಯತೆಗೆ ಒಡ್ಡಿಕೊಳ್ಳುತ್ತೇವೆಂದರೆ ಅದೆಂಥ ಮಾಯೆಯಿರಬಹುದು ಅಲ್ಲಿ! ನಮ್ಮ ಹಿರೀಕರು ಅದ್ಯಾವುದೋ ಅರ್ಥದಲ್ಲಿ 'ದುಡ್ಡೆಂದರೆ ಮಾಯೆ ಕಣಾ' ಎಂದರು, ಅದು ಮತ್ತೊಂದು ರೀತಿಯಲ್ಲಿ ಇಂದು ಅರ್ಥಪೂರ್ಣವಾಗಿದೆ.

ನನ್ನನ್ನು ಬಹು ಮುಖ್ಯವಾಗಿ ಕಾಡಿದ ಎರಡು ಸಂಗತಿಗಳನ್ನು ಇಲ್ಲಿ ಪ್ರಸ್ತಾಪಿಸುತ್ತೇನೆ. ಕೆಲ ತಿಂಗಳುಗಳ ಹಿಂದೆ ಭಾರತೀಯ ಮೂಲದ ವಿಗ್ನೇಶ್ ಸುಂದರೇಸನ್ ಅನ್ನುವ ವ್ಯಕ್ತಿ ಸುಮಾರು ಆರುನೂರು ಕೋಟಿ ರೂಪಾಯಿಗಳನ್ನು ನೀಡಿ ಡಿಜಿಟಲ್ ಪೇಂಟಿಂಗ್ ಒಂದನ್ನು ಖರೀದಿಸಿದ್ದು ಸುದ್ದಿಯಾಯಿತು. ಆತ ಅದನ್ನು ಕೊಂಡುಕೊಂಡದ್ದೂ ಅಗೋಚರ ಕ್ರಿಪ್ಟೋ ನಾಣ್ಯಗಳನ್ನು ನೀಡಿಯೇ ಎಂಬುದನ್ನು ಹೇಳಬೇಕಿಲ್ಲ. ಕುತೂಹಲದ ಸಂಗತಿಯೆಂದರೆ, ಆತ ಆ ಚಿತ್ರಕಲೆಯನ್ನು ಪ್ರದರ್ಶನಕ್ಕೆ ಇಡುವವನಿದ್ದಾನಂತೆ. ಅದಕ್ಕೆಂದೇ ಒಂದು ಅದ್ದೂರಿ ಮಳಿಗೆಯನ್ನು ಕಟ್ಟಿಸುವ ಯೋಚನೆ ಇದೆಯಂತೆ.